**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 318

ಸದಸ್ಯರ ಹೆಸರು : ಶ್ರೀ ಟಿ.ಎನ್. ಜವರಾಯಿ ಗೌಡ
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 19.08.2026

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಐಟಿ ಬಿಟಿ ಸಿಟಿ. ಬೆಂಗಳೂರಿನ ವಾಯುಮಾಲಿನ್ಯ ತಡೆಗಟ್ಟುವ ಉದ್ದೇಶದ ಜತೆಗೆ ಪರಿಸರಸ್ನೇಹಿ ಸಾರಿಗೆ ವ್ಯವಸ್ಥೆ ರೂಪಿಸಲು ಮುಂದಾಗಬೇಕಿದ್ದ ಸರ್ಕಾರ ಎಲೆಕ್ಟ್ರಿಕ್ ಬಸ್‌ಗಳ ಖರೀದಿಯಲ್ಲಿ ಹಿನ್ನಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಬೆಂಗಳೂರು ನಗರದಲ್ಲಿ ವಾಯುಮಾಲಿನ್ಯ ತಡೆಗಟ್ಟುವ ಉದ್ದೇಶದಿಂದ 1779 ಎಲೆಕ್ಟ್ರಿಕ್ ಬಸ್ಸುಗಳನ್ನು ಜಿಸಿಸಿ ಆಧಾರದ ಮೇಲೆ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪಿಎಂ-ಇ-ಡ್ರೈವ್ ಯೋಜನೆಯಡಿ 4500 ಎಲೆಕ್ಟ್ರಿಕ್ ಬಸ್‌ಗಳನ್ನು ಜಿಸಿಸಿ ಆಧಾರದ ಮೇಲೆ ಆಚರಣೆ ಮಾಡಲು ಸಂಸ್ಥೆಗೆ ಮಂಜೂರಾತಿ ದೊರೆತಿದ್ದು, ಸದರಿ ಬಸ್ಸುಗಳ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡಿರುತ್ತದೆ. ಟೆಂಡರ್‌ನಲ್ಲಿ ಆಯ್ಕೆಯಾದ ಕಂಪನಿಗಳಿಗೆ ಕಾರ್ಯಾದೇಶವನ್ನು ನೀಡುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.<br><br>ಸಂಸ್ಥೆಯಲ್ಲಿ ಪ್ರತಿದಿನಕ್ಕೆ ಪ್ರತಿ ಬಸ್ಸಿಗೆ ಕಾರ್ಯಾಚರಣೆಯಾಗುವ ಪ್ರತಿ ಕಿ.ಮೀಗೆ ನೀಡುತ್ತಿರುವ ದರದ ವಿವರಗಳು ಕೆಳಕಂಡಂತಿವೆ:- |
| ಆ. | ರಾಜ್ಯ ಸರ್ಕಾರ ಪಿಎಂಇ-ಡ್ರೈವ್ ಯೋಜನೆಯಡಿ ಎಷ್ಟು ಎಲೆಕ್ಟ್ರಿಕ್ ಬಸ್‌ಗಳ ಖರೀದಿಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ; ಹಾಗಿದ್ದಲ್ಲಿ, ಈ ಯೋಜನೆಯ ಪ್ರಕ್ರಿಯೆ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು) | |
| ಇ. | ಬೆಂಗಳೂರು ನಗರದಲ್ಲಿ ಬಿ.ಎಂ.ಟಿ.ಸಿ ಮೂಲಕ ಎಷ್ಟು ಎಲೆಕ್ಟ್ರಿಕ್ ಬಸ್‌ಗಳು ಗುತ್ತಿಗೆ ಆಧಾರದಲ್ಲಿ ಸೇವೆ ನೀಡುತ್ತಿವೆ; ಪ್ರತಿ ದಿನಕ್ಕೆ ಪ್ರತಿ ಬಸ್ಸಿಗೆ ನೀಡುತ್ತಿರುವ ದರವೆಷ್ಟು; ಇದರ ನಿರ್ವಹಣೆ ಹಾಗೂ ಇನ್ನಿತರೆ ಸಂಪೂರ್ಣ ಮಾಹಿತಿ ಒದಗಿಸುವುದು? | |

| Service Provider | No. of buses | Assured Kms/Day/Bus | Per Km Fee |
|---|---|---|---|
| M/s. NTPC VVNL | 90 | 180 | Rs.53.24 |
| M/s. Switch Mobility Automotive Ltd.. | 300 | 225 | Rs.49.88 |
| M/s. TML Smart City Mobility Solution Ltd.. | 921<br>148 | 200 | Rs.41.83<br>Rs.41.01 |
| M/s.OHM Global Mobility Private Ltd.. | 320 | 225 | Rs.65.80 |

| | | |
|---|---|---|
| | | ಎಲೆಕ್ಟ್ರಿಕ್ ಬಸ್ಸುಗಳ ನಿರ್ವಹಣೆ, ಚಾರ್ಜಿಂಗ್ ಸೌಲಭ್ಯ ಮತ್ತು ಚಾಲಕರ ನಿಯೋಜನೆಯನ್ನು ಸೇವಾ ಪೂರೈಕೆದಾರರು ನಿರ್ವಹಿಸುತ್ತಿದ್ದು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವತಿಯಿಂದ ಸದರಿ ಬಸ್ಸುಗಳಿಗೆ ನಿರ್ವಾಹಕರನ್ನು ಮಾತ್ರ ನಿಯೋಜಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದೆ. |

ಸಂಖ್ಯೆ: ಟಿಡಿ 217 ಟಿಸಿಕ್ಯೂ 2026

(ಬಿ.ಎಸ್. ಸುರೇಶ)
ಸಾರಿಗೆ ಸಚಿವರು